ಮಾಡಿ ಸ್ವೀಕರಿಸಬೇಕು, ಕಣ್ಣುಮುಚ್ಚಿ ನುಂಗುವುದಲ್ಲ ಎಂಬುದು ಸ್ವಾಮಿ ವಿವೇಕಾನಂದರ ನಿಲುವು. ಶಾಸ್ತ್ರಾನುಸಾರವಾಗಿಯೂ ಸ್ವಾನುಭೂತಿಗೆ ಅನುಗುಣವಾಗಿಯೂ ವಿಚಾರದಲ್ಲಿ ತೊಡಗ ಬೇಕು. ವಾಸ್ತವ ದೂರವಾದ ವಿಚಾರವು ಕೇವಲ ಬುದ್ಧಿ ಚಮ ತ್ಕಾರವಾಗುತ್ತದೆ ಅಷ್ಟೇ. ಅದಕ್ಕಾಗಿಯೇ ಶ್ರೀರಾಮಕೃಷ್ಣರು ಅತಿ ಯಾಗಿ ವಿಚಾರದಲ್ಲಿ ತೊಡಗುವುದು ಒಳ್ಳೆಯದಲ್ಲ ಎಂದು ಹೇಳಿರುವುದು.

ಅಂತರ್ದೃಷ್ಟಿಯು (intution) ವಿಚಾರವನ್ನೂ ಮೀರಿರು ವುದು, ಅಂತಃಸ್ಫೂರ್ತಿಯಿಂದ ಸ್ಫುರಿಸಿರುವಂತಹದು. ಯಥಾರ್ಥ ಆಧ್ಯಾತ್ಮಿಕ ಅನುಭವಗಳೆಲ್ಲವೂ ಈ ಗುಂಪಿಗೆ ಸೇರುತ್ತವೆ. ವಿವೇಕಾನಂದರು ಈ ಮೂರನ್ನು ಕ್ರಮವಾಗಿ ಮಂಜುಗಡ್ಡೆ, ನೀರು ಮತ್ತು ಆವಿ ಇವುಗಳಿಗೆ ಹೋಲಿಸುತ್ತಾರೆ. ಅವಿಚಾರಿತ ವಾದುದು (instinct) ವೈಚಾರಿಕವಾಗಿ (reason) ಮುಂದೆ ವಿಚಾರಾತೀತವಾಗಬೇಕು.

### ಭಕ್ತಿಯನ್ನು ಬೆಳೆಸಿಕೊಳ್ಳಬೇಕು

ಅತಿಯಾಗಿ ವಿಚಾರ ಮಾಡುವುದನ್ನು ಬಿಟ್ಟು ಭಗವಂತನಲ್ಲಿ ಭಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಶ್ರೀರಾಮಕೃಷ್ಣರು ಹೇಳು ತ್ತಾರೆ. ಭಕ್ತಿಯು ಹಂತಹಂತವಾಗಿ ಉಂಟಾಗುತ್ತದೆ ಎಂಬುದನ್ನು ಭಾಗವತದಲ್ಲಿ ವಿವರಿಸಲಾಗಿದೆ *(೧.೨.೧೭-೨೧)* :

**ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।**
**ಹೃದ್ಯಂತಃಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ ಸತಾಮ್ ॥**

**ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವತಸೇವಯಾ ।**
**ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥**

**ತದಾ ರಜಸ್ತಮೋಭಾವಾಃ ಕಾಮಲೋಭಾದಯಶ್ಚ ಯೇ ।**
**ಚೇತ ಏತೈರನಾವಿದ್ಧಂ ಸ್ಥಿತಂ ಸತ್ತ್ವೇ ಪ್ರಸೀದತಿ ॥**

**ಏವಂ ಪ್ರಸನ್ನಮನಸೋ ಭಗವದ್ಭಕ್ತಿಯೋಗತಃ ।**
**ಭಗವತ್ತತ್ತ್ವವಿಜ್ಞಾನಂ ಮುಕ್ತಸಂಗಸ್ಯ ಜಾಯತೇ ॥**

**ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।**
**ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ ॥**

''ತನ್ನ ವಿಚಾರವನ್ನೇ ಯಾರು ಕೇಳುತ್ತ ಸ್ತುತಿಸುತ್ತ ಇರು ತ್ತಾರೋ ಶ್ರೀಕೃಷ್ಣನು ಅವರ ಹೃದಯದಲ್ಲಿ ನೆಲೆಸಿ ಅಲ್ಲಿರುವ ಎಲ್ಲ ಅಶುಭಗಳನ್ನೂ ನಾಶಮಾಡುತ್ತಾನೆ. ಈ ರೀತಿ ಸತತ ಭಾಗವತ ಸೇವೆಯಲ್ಲಿ ತೊಡಗಿರುವವರಲ್ಲಿ ನಿಷ್ಠಾಭಕ್ತಿಯು ಉಂಟಾಗು ತ್ತದೆ. ಆಗ ರಜಸ್ತಮೋಭಾವಗಳು, ಕಾಮಲೋಭಾದಿಗಳು ಅವ ನನ್ನು ಕಾಡದೇ ಇರುವುದರಿಂದ ಅವನು ಸತ್ತ್ವದಲ್ಲಿ ನೆಲೆ ಗೊಳ್ಳುತ್ತಾನೆ. ಹೀಗೆ ಭಕ್ತಿಯೋಗದ ಮೂಲಕ ಅವನ ಮನಸ್ಸು ಪ್ರಸನ್ನವಾಗುತ್ತದೆ. ಆಗ ಮುಕ್ತಸಂಗನಾದ ಅವನಲ್ಲಿ ಭಗವ ತ್ತತ್ತ್ವದ ಅನುಭವಾತ್ಮಕ ಜ್ಞಾನ ಉಂಟಾಗುತ್ತದೆ. ತನ್ನಲ್ಲಿಯೇ ಭಗವಂತನನ್ನು ಕಂಡಾಗ ಅವನ ಹೃದಯಗ್ರಂಥಿಗಳೆಲ್ಲ ಕಡಿದು ಹೋಗುತ್ತವೆ, ಎಲ್ಲ ಸಂಶಯಗಳ ನಿವಾರಣೆಯಾಗುತ್ತದೆ ಮತ್ತು ಅವನ ಕರ್ಮಗಳೆಲ್ಲವೂ ನಾಶವಾಗುತ್ತವೆ.''

### ಸಾಕಾರ-ನಿರಾಕಾರ

ಭಗವಂತನನ್ನು ನೋಡಲು ಸಾಧ್ಯವೆ? ಎಂಬ ಪ್ರಶ್ನೆಗೆ ಶ್ರೀ ರಾಮಕೃಷ್ಣರು ಉತ್ತರಿಸುತ್ತಾರೆ: ''ಹೌದು, ಖಂಡಿತವಾಗಿಯೂ. ಸಾಕಾರ ನಿರಾಕಾರ ಎರಡೂ ರೂಪದಲ್ಲೂ. ಭಗವಂತನನ್ನು ಸಾಕಾರರೂಪದಲ್ಲಿ ಅಂದರೆ ಚಿನ್ಮಯ ರೂಪದಲ್ಲಿ ದರ್ಶನ ಮಾಡ ಬಹುದು. ಮನುಷ್ಯನಲ್ಲೂ ಆತನನ್ನು ಪ್ರತ್ಯಕ್ಷವಾಗಿ ನೋಡ ಬಹುದು. ಅವತಾರ ಪುರುಷನನ್ನು ನೋಡಿದ್ದೇ ಆದರೆ ಭಗವಂತ ನನ್ನೇ ನೋಡಿದ ಹಾಗೆ. ಭಗವಂತ ಯುಗಯುಗದಲ್ಲೂ ಮನುಷ್ಯ ರೂಪ ಧರಿಸಿ ಅವತರಿಸುತ್ತಾನೆ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೪೯)*

ಪರಬ್ರಹ್ಮವು ಸಾಕಾರ ನಿರಾಕಾರಗಳೆರಡನ್ನೂ ಮೀರಿದುದು. ಸಾಕಾರವೆಂದರೆ ಇಂದ್ರಿಯಗೋಚರವಾದುದು. ಈ ದೃಷ್ಟಿಯಿಂದ ಶಬ್ದವೂ ಸಾಕಾರವೇ. ನಿರಾಕಾರವೆಂದರೆ ವಿವಿಧ ಭಾವನೆಗಳು – abstract ideas. ಮಣ್ಣಿನಿಂದಾದ ವಿವಿಧ ಪದಾರ್ಥಗಳು ಮಣ್ಣಿನ ವಿವಿಧ ರೂಪಗಳೇ ಆಗಿರುವಂತೆ, ಭಗವದ್ರೂಪಗಳು ಚಿನ್ಮಯರೂಪಗಳು. ಮನುಷ್ಯನಲ್ಲಿ ಈ ಚೈತನ್ಯಶಕ್ತಿ ಅಧಿಕವಾಗಿ ಅಭಿವ್ಯಕ್ತವಾಗಿರುವುದರಿಂದ ಅವನಲ್ಲಿ ನಾವು ಮುಖ್ಯವಾಗಿ ಭಗ ವಂತನನ್ನು ಕಾಣಬೇಕು ಎಂದು ಶ್ರೀರಾಮಕೃಷ್ಣರು ಸೂಚಿಸು ತ್ತಿದ್ದಾರೆ. ಸ್ವಾಮಿ ವಿವೇಕಾನಂದರ ಸೇವಾತತ್ತ್ವಕ್ಕೆ ಈ ಭಾವನೆ ಯೇ ತಳಹದಿಯಾಯಿತು. ಭಾಗವತದ ಒಂದು ಶ್ಲೋಕ:

**ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ ।**
**ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾ ವಿಡಂಬನಮ್ ॥**

''ನಾನು ಸರ್ವಭೂತಗಳಲ್ಲೂ ಆತ್ಮರೂಪದಲ್ಲಿ ನೆಲೆಸಿರು ವೆನು. ಆದರೆ ಇದನ್ನು ಕಡೆಗಣಿಸಿ ಜನರು ಮೂರ್ತಿಯನ್ನು ಪೂಜಿಸುತ್ತಾರೆ. ಇದೆಂಥ ವಿಡಂಬನೆ?'' ಇದು ಬಸವಣ್ಣನವರ ಒಂದು ವಚನವನ್ನು ನೆನಪಿಸಿಕೊಡುತ್ತದೆ:

**ಕಲ್ಲನಾಗರ ಕಂಡರೆ ಹಾಲನೆರೆಯೆಂಬುರು**
**ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ।**
**ಉಂಬ ಜಂಗಮ ಬಂದರೆ ನಡೆಯೆಂಬರು**
**ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ ।**
**ನಮ್ಮ ಕೂಡಲ ಸಂಗನ ಶರಣರ ಕಂಡು,**
**ಉದಾಸೀನವ ಮಾಡಿದರೆ**
**ಕಲ್ಲತಾಗಿದ ಮಿಟ್ಟೆಯಂತಪ್ಪರಯ್ಯಾ ॥**


*(ಮುಂದುವರಿಯುವುದು)*

# ದಿವ್ಯಗುರುವಾಗಿ ಶ್ರೀರಾಮಕೃಷ್ಣರು

**ಸ್ವರ್ಣಗೌರಿ**

ಜಗತ್ತು ಕಂಡ ಅತ್ಯಂತ ಶ್ರೇಷ್ಠ ಗುರು ಶ್ರೀರಾಮಕೃಷ್ಣರು. ಆಧ್ಯಾತ್ಮಿಕ ಜಗತ್ತಿನ ಮೇರುಶಿಖರವಾಗಿದ್ದ ಅವರು ಸ್ವಾಮಿ ವಿವೇಕಾನಂದರಂಥ ಮಹಾವ್ಯಕ್ತಿಗಳನ್ನು ತಯಾರು ಮಾಡಿದರು. ಈ ದಿವ್ಯಗುರುಗಳ ಮಹತ್ವವನ್ನು ಕುರಿತು ಬರೆದಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಲೇಖನಗಳನ್ನು ಬರೆದಿರುವ ಇವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

‘ಸಾವಿರಾರು ಸೂರ್ಯಚಂದ್ರರು ಹುಟ್ಟಿಬಂದರೂ ಕೂಡ ಹೃದಯದ ಒಳಗಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಇದನ್ನು ಕೇವಲ ಗುರುವಿನ ಅನುಗ್ರಹದಿಂದ ಮಾತ್ರ ತೊಡೆದು ಹಾಕಲಾಗುತ್ತದೆ’ ಎಂದು ಸಿಖ್‌ಧರ್ಮದ ಸ್ಥಾಪಕಾಚಾರ್ಯ ಗುರುನಾನಕ್ ಹೇಳುತ್ತಿದ್ದರು.



ಬಹುಶಃ ಆಧ್ಯಾತ್ಮಿಕ ಗುರುವಿನ ಮಹತ್ವವನ್ನು ತಿಳಿಸುವ ಅತಿ ಶ್ರೇಷ್ಠ ವಿವರಣೆ ಇದು ಎನ್ನಬಹುದು.

ಶ್ರೀರಾಮಕೃಷ್ಣರು, ‘‘ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು. ಗುರುವಾಕ್ಯದಲ್ಲಿ ವಿಶ್ವಾಸವಿಡಬೇಕು.’’ ‘‘ಭಗವಂತ ಗುರುವಿನ ರೂಪವನ್ನು ಧರಿಸಿ, ತಾನೇ ಮುಂದೆ ಬಂದು ಜೀವಿಯ ಪಾಶವನ್ನು ಕತ್ತರಿಸಿ ಹಾಕುವುದಾದರೆ, ಆಗ ಜೀವಿ ಭಯಪಡಬೇಕಾದ್ದೇನಿಲ್ಲ.’’ ‘‘ಮುಖ್ಯವಾಗಿ ಬೇಕಾದದ್ದು ಶ್ರದ್ಧೆ. ಗುರು ಅನೇಕರಿಗೆ ಬೇಕಾಗುತ್ತಾನೆ. ಆದರೆ ಆತನ ವಾಕ್ಯದಲ್ಲಿ ಶ್ರದ್ಧೆಯಿಡಬೇಕು. ಗುರುವನ್ನು ಸಾಕ್ಷಾತ್ ಭಗವಂತನೇ ಎಂಬ ದೃಷ್ಟಿಯಿಂದ ನೋಡಿದಾಗ ಮಾತ್ರವೇ ಆಧ್ಯಾತ್ಮಿಕ ಉನ್ನತಿ ಉಂಟಾಗುತ್ತದೆ. ಅದಕ್ಕಾಗಿಯೇ ವೈಷ್ಣವರು ಹೇಳುವುದು ‘ಗುರು,ಕೃಷ್ಣ, ವೈಷ್ಣವ ಒಂದೇ’ ’’ – ಎಂದೆಲ್ಲಾ ‘ವಚನವೇದ’ದಲ್ಲಿ ವಿವಿಧ ಸಂದರ್ಭಗಳಲ್ಲಿ ಹೇಳಿದ್ದಾರೆ.

ಒಟ್ಟು ತಾತ್ಪರ್ಯವೇನೆಂದರೆ, ಆ ಭಗವಂತನೇ ಮಾನವ ಗುರುವಿನ ರೂಪದಲ್ಲಿ ಬರುತ್ತಾನೆ. ಹಾಗಾದರೆ, ಎಲ್ಲಾ ಗುರುಗಳು ಸಚ್ಚಿದಾನಂದ ಸ್ವರೂಪವೇ ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೆ ಉತ್ತರವನ್ನು ಶ್ರೀರಾಮಕೃಷ್ಣರೇ ನೀಡಿದ್ದಾರೆ: ‘‘ಸದ್ಗುರುವಿಗೆ ಲಕ್ಷಣಗಳಿವೆ. ಯಾರು ಕಾಶಿಗೆ ಹೋಗಿ ಅದನ್ನು ಚೆನ್ನಾಗಿ ನೋಡಿ ಬಂದಿರುವರೋ, ಅವರಿಂದ ಕಾಶಿ ವಿಷಯವಾಗಿ ತಿಳಿದುಕೊಳ್ಳಬೇಕು. ಬರೀ ಪುಸ್ತಕಪಾಂಡಿತ್ಯ ಯಾವ ಪ್ರಯೋಜನಕ್ಕೂ ಬಾರದು. ಯಾರಿಗೆ ಈ ಸಂಸಾರ ಅನಿತ್ಯ ಎಂದು ಬೋಧೆಯಾಗಿಲ್ಲವೊ, ಅಂಥ ಪಂಡಿತನ ಉಪದೇಶ ಸ್ವೀಕರಿಸುವುದು ಯುಕ್ತವಾದುದಲ್ಲ. ಪಂಡಿತನು ವಿವೇಕ ವೈರಾಗ್ಯ ಸಂಪನ್ನನಾಗಿದ್ದರೆ ತಾನೆ ಆತ ಉಪದೇಶ ಕೊಡಲು ಅರ್ಹನಾಗುತ್ತಾನೆ?’’

## ‘ಗುರು’ ಶಬ್ದಾರ್ಥ

ಸಂಸ್ಕೃತದಲ್ಲಿ ‘ಗು’ ಎಂದರೆ ಅಂಧಕಾರ ಮತ್ತು ‘ರು’ ಎಂದರೆ ಬೆಳಕು. ಅರಿವಿನ ಒಂದು ಮೂಲತತ್ತ್ವವಾಗಿ ಗುರು ಕಾಲ್ಪನಿಕತೆಯಿಂದ ನಿಜಸ್ಥಿತಿಗೆ, ಅಜ್ಞಾನದ ಅಂಧಕಾರದಿಂದ ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುತ್ತಾನೆ. ಒಬ್ಬ ಉತ್ತಮ ಗುರುವನ್ನು ಪಡೆದುಕೊಳ್ಳುವುದು ಆತ್ಮಜ್ಞಾನ ಹೊಂದಲು ಒಂದು ಪೂರ್ವತಯಾರಿ ಎನ್ನಬಹುದು. ಗುರು ಭೂಮಿಯ ಮೇಲಿರುವ ಅತಿಭೌತಿಕ ಹಾಗೂ ಉನ್ನತ ಶಕ್ತಿಯ ಕುರಿತಾದ ಅತ್ಯುನ್ನತ ಜ್ಞಾನವನ್ನು ಹೊಂದಿರುವ ವ್ಯಕ್ತಿ. ತಂದೆತಾಯಂದಿರು, ಶಿಕ್ಷಕರು, ಕೆಲವು ಜ್ಞಾನಾರ್ಜನೆಗೆ ಸಹಾಯಕವಾಗುವಂತಹ ವಸ್ತುಗಳು ಮತ್ತು ಪ್ರತಿ ವ್ಯಕ್ತಿಯಲ್ಲಿರುವ ಬೌದ್ಧಿಕ ಶಿಸ್ತು ಈ ಮೂಲತತ್ತ್ವವನ್ನು ಪ್ರತಿಬಿಂಬಿಸುವ ಇತರ ಕೊಂಡಿಗಳು ಎನ್ನಬಹುದು. ಹಿಂದು, ಸಿಖ್ ಹಾಗೂ ಇನ್ನಿತರ ಕೆಲವು ಭಾರತೀಯ ಧರ್ಮಗಳಲ್ಲಿ ಮತ್ತು ಕೆಲವು ಹೊಸ ಧಾರ್ಮಿಕ ಪಂಥದ ಚಳುವಳಿಗಳಲ್ಲಿ ಈ ‘ಗುರು’ ಶಬ್ದವನ್ನು ಬಳಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ‘ಗುರು’ ಎಂಬ ಶಬ್ದವನ್ನು ‘ಶಿಕ್ಷಕ’ ಎಂಬ ಸಾಮಾನ್ಯ ಅರ್ಥದಲ್ಲಿ ಬಳಸಲಾಗುತ್ತಿದೆ. ಪಾಶ್ಚಾತ್ಯ ಬಳಕೆಯಲ್ಲಿ, ಗುರು ಎಂಬ ಶಬ್ದದ ಅರ್ಥವನ್ನು, ಅನುಯಾಯಿಗಳನ್ನು ಹೊಂದುವ ಸಾಮರ್ಥ್ಯವಿರುವ ಯಾವುದೇ ವ್ಯಕ್ತಿಗೂ ಕೂಡ ಬಳಸುತ್ತಾರೆ. ಅವರು ತತ್ತ್ವಶಾಸ್ತ್ರದ ಅಥವಾ ಯಾವುದೇ ಧಾರ್ಮಿಕ ಪಂಥಕ್ಕೆ ಸೇರಬೇಕೆಂದೇನಿಲ್ಲ. ಇನ್ನೂ ಹೆಚ್ಚಾಗಿ ಪಾಶ್ಚಾತ್ಯರು, ಒಬ್ಬ ವ್ಯಕ್ತಿಯು ಪ್ರಾಪಂಚಿಕವಾದ ವಿಷಯಕ್ಕೆ ಅಥವಾ ‘ವ್ಯವಹಾರ’ ಪ್ರಪಂಚಕ್ಕೆ ಸಂಬಂಧಿಸಿದಂತೆ ಉತ್ತಮ ಜ್ಞಾನ, ನೈಪುಣ್ಯತೆ ಹೊಂದಿದ್ದರೂ ಕೂಡ ‘ಗುರು’ ಎಂಬ ಶಬ್ದವನ್ನು ಬಳಸುತ್ತಾರೆ.

ಪ್ರಸ್ತುತ ನಾವು ಶ್ರೀರಾಮಕೃಷ್ಣರಲ್ಲಿ ಪ್ರಕಟವಾದ ಆ ‘ಗುರು’ ಭಾವದ ಬಗ್ಗೆ ತಿಳಿದುಕೊಳ್ಳೋಣ.

### ಶ್ರೀರಾಮಕೃಷ್ಣರ ಗುರುಭಾವ

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು 'ಅವತಾರ ವರಿಷ್ಠಾಯ' ಎಂದು ಕರೆದಿದ್ದಾರೆ. ಇಂತಹವರಲ್ಲಿ ವಿಕಸಿತವಾದ ಆ ಗುರುಭಾವವೂ ಕೂಡ ಶ್ರೇಷ್ಠ ಮಟ್ಟದ್ದು. ಹನ್ನೆರಡು ವರ್ಷಗಳ ಸುದೀರ್ಘ ತಪಸ್ಸಿನ ನಂತರ ಅವರಲ್ಲಿ ಅನನ್ಯ ಸದೃಶ ಗುರುಭಾವವು ಪ್ರಕಾಶಗೊಂಡಿತು. ಈ ಗುರುಭಾವವು ಆಯಾಯ ಸಾಧಕರ ಮಾರ್ಗದಲ್ಲಿದ್ದ ಅಡ್ಡಿಆತಂಕಗಳನ್ನು ಆಯಾಯ ಸಾಧಕನ ಆವಶ್ಯಕತೆಗೆ ತಕ್ಕಂತೆ ನಿವಾರಿಸಿ, ಆಧ್ಯಾತ್ಮಿಕ ಪಥದಲ್ಲಿ ಮುಂದುವರಿದು ಆತ್ಯಂತಿಕ ಗುರಿ ತಲುಪಲು ಸಹಾಯ ಹಸ್ತ ನೀಡಿತು. ವಿಭಿನ್ನ ಸಾಧಕರಿಗೆ ವಿಭಿನ್ನ ರೀತಿಯಲ್ಲಿ ವ್ಯಕ್ತವಾದ ಅವರ ಗುರುಶಕ್ತಿ ನಿಜಕ್ಕೂ ಸೋಜಿಗ.

''ಗುರುಭಾವದಿಂದ ಪ್ರೇರಿತರಾಗಿ ಭಾವಮುಖ ಸ್ಥಿತಿಯಲ್ಲಿರುತ್ತಿದ್ದ ಶ್ರೀರಾಮಕೃಷ್ಣರು ಯಾವ ಸ್ಥಾನದಲ್ಲಿ ಎಷ್ಟೆಷ್ಟು ಜನರೊಡನೆ ಬೆರೆತು, ಏನೇನು ಮಾಡಿದರು ಎಂಬುದನ್ನೆಲ್ಲಾ ಹೇಳಿ ಮುಗಿಸಲು ಸಾಧ್ಯವಿಲ್ಲ'' ಎಂದು ಶ್ರೀರಾಮಕೃಷ್ಣರ ಜೀವನಚರಿತ್ರೆ ಬರೆದ ಸ್ವಾಮಿ ಶಾರದಾನಂದರೇ ಸ್ವತಃ ಹೇಳುತ್ತಾರೆ. *(ಶ್ರೀರಾಮಕೃಷ್ಣ ಲೀಲಾಪ್ರಸಂಗ – ಸಂ ೨, ಪು. ಸಂ. ೭೦)* ಆದರೂ ಸಹ ನಾವಿಲ್ಲಿ ಒಂದೆರಡು ಸಾಧಕರ ಜೀವನವನ್ನು ಅವಲೋಕಿಸುವ ಪ್ರಯತ್ನ ಮಾಡೋಣ:

**ನಾರಾಯಣ ಶಾಸ್ತ್ರಿ:** ನಾರಾಯಣ ಶಾಸ್ತ್ರಿಗಳು ಪ್ರಾಚೀನ ಕಾಲದ ನಿಷ್ಠಾವಂತ ಬ್ರಹ್ಮಚಾರಿಗಳಂತೆ ಇಪ್ಪತ್ತೈದು ವರ್ಷ ಗುರುಗೃಹದಲ್ಲಿ ವಾಸಮಾಡಿ ಸಕಲ ಶಾಸ್ತ್ರ ಪಾರಂಗತರಾಗಿದ್ದರು. ಕಾಶಿಯಲ್ಲಿ ವಿವಿಧ ಆಚಾರ್ಯರ ಮೂಲಕ ಐದು ದರ್ಶನಗಳಲ್ಲಿ ಸಂಪೂರ್ಣ ವ್ಯುತ್ಪತ್ತಿಯನ್ನು ಪಡೆದಿದ್ದರು. ಒಮ್ಮೆ ಜಯಪುರದ ಮಹಾರಾಜನು ವಿಪುಲ ವೇತನದ ಆಸೆ ತೋರಿಸಿ ಸಭಾಪಂಡಿತನಾಗುವಂತೆ ಕೇಳಿಕೊಂಡಿದ್ದನು. ಆದರೆ ಜ್ಞಾನಾರ್ಜನೆಯ ದಾಹದಿಂದ ಶಾಸ್ತ್ರಿಗಳು ಒಪ್ಪಿರಲಿಲ್ಲ. ಇವರು ಸಾಮಾನ್ಯ ಪಂಡಿತರಂತಲ್ಲದೆ ವೈರಾಗ್ಯವನ್ನು ರೂಢಿಸಿಕೊಂಡಿದ್ದರು. ಶಾಸ್ತ್ರದಲ್ಲಿ ಹೇಳಿರುವುದನ್ನೆಲ್ಲಾ ಪ್ರತ್ಯಕ್ಷ ಅನುಭವಿಸಲು ಸಾಧನೆ ಆವಶ್ಯಕ ಎಂಬುದನ್ನು ಮನಗೊಂಡಿದ್ದರು.

ಶ್ರೀರಾಮಕೃಷ್ಣರ ಪರಿಚಯವಾದ ನಂತರ ಶಾಸ್ತ್ರಿಗಳಿಗೆ ತಾವು ಓದಿ ಕಂಠಪಾಠ ಮಾಡಿರುವುದನ್ನೆಲ್ಲಾ ಇವರು ಪ್ರತ್ಯಕ್ಷ ಅನುಭವಿಸಿರುವರು ಮತ್ತು ಸಮಾಧಿ ಎಂಬುದು ಇವರಿಗೆ ಸಹಜ ಸ್ಥಿತಿ ಎಂಬುದನ್ನು ಅರಿತರು. ದಿನಗಳೆದಂತೆಲ್ಲಾ ಶ್ರೀರಾಮಕೃಷ್ಣರ ದಿವ್ಯ ಸಂಗದ ಪರಿಣಾಮವಾಗಿ ಶಾಸ್ತ್ರಿಗಳಲ್ಲಿ ವೈರಾಗ್ಯ, ವ್ಯಾಕುಲತೆಗಳು ವೃದ್ಧಿಯಾಗುತ್ತಾ ಹೋದವು. ಬ್ರಹ್ಮಸಾಕ್ಷಾತ್ಕಾರದ ವಿಧಾನವನ್ನು ಇವರಿಂದ ತಿಳಿದುಕೊಳ್ಳಲೇಬೇಕು ಎಂಬ ಹಂಬಲ ಉತ್ಕಟವಾಯಿತು. ಮಹಾಮಹೋಪಾಧ್ಯಾಯನಾಗಿ ಸಮಾಜದಲ್ಲಿ ಹೆಸರು, ಕೀರ್ತಿ, ಪ್ರತಿಷ್ಠೆಗಳನ್ನು ಗಳಿಸಬೇಕು ಎಂಬ ತನ್ನ ಅನೇಕ ಕಾಲದ ಆಸೆಯೂ ಈಗ ತುಚ್ಛವೆನಿಸತೊಡಗಿತು. ಬಳಿಕ ಕಾಡಿಬೇಡಿ ಶ್ರೀರಾಮಕೃಷ್ಣರಿಂದ ಸಂನ್ಯಾಸ ಸ್ವೀಕರಿಸಿ, ಬ್ರಹ್ಮ ಸಾಕ್ಷಾತ್ಕಾರಕ್ಕಾಗಿ ಪ್ರಾಣಹೋಗುವವರೆಗೂ ಪ್ರಯತ್ನಿಸುತ್ತೇನೆಂದು ದೃಢ ಪ್ರತಿಜ್ಞೆ ಮಾಡಿ ವಸಿಷ್ಠಾಶ್ರಮಕ್ಕೆ ಸಾಧನೆಗೆಂದು ಹೊರಟುಹೋದರು. ಮತ್ತೆಂದಿಗೂ ಹಿಂದಿರುಗಿ ಬರಲೇ ಇಲ್ಲ. ಹೀಗೆ ಶ್ರೀರಾಮಕೃಷ್ಣರ ಗುರುಭಾವವು ನಾರಾಯಣ ಶಾಸ್ತ್ರಿಗಳ ಆಧ್ಯಾತ್ಮಿಕ ಪಥದಲ್ಲಿನ ವಿಘ್ನವನ್ನು ನಿವಾರಿಸಿ, ಆತ್ಯಂತಿಕ ಗುರಿಯನ್ನು ಮುಟ್ಟಿಸಿತು.

**ಭಗವಾನ್ ದಾಸ್ ಬಾಬಾಜಿ:** ಭಗವಾನ್‌ದಾಸ್ ಬಾಬಾಜಿಯವರ ತ್ಯಾಗ, ವೈರಾಗ್ಯ ಮತ್ತು ಭಗವದ್ಭಕ್ತಿಯ ವಿಷಯ ಬಂಗಾಳದಲ್ಲೆಲ್ಲಾ ಜನಜನಿತವಾಗಿತ್ತು. ಅಂದಿನ ವೈಷ್ಣವ ಸಮಾಜಕ್ಕೆ ಕಳೆಯಂತಿದ್ದರು ಬಾಬಾಜಿ. ಒಂದೇ ಜಾಗದಲ್ಲಿ ಅಲುಗಾಡದೆ ಕುಳಿತು ಹಗಲುರಾತ್ರಿ ಜಪತಪ, ಧ್ಯಾನಧಾರಣಾದಿಗಳನ್ನು ಮಾಡುತ್ತಿದ್ದ ಕಾರಣ ಅವರ ಪಾದಗಳೆರಡೂ ಜಡವಾಗಿ ಹೋಗಿದ್ದವು. ಆದರೆ ಎಂಬತ್ತು ವರ್ಷ ಮೀರಿ ಹೋಗಿದ್ದರೂ, ಮೇಲೇಳುವಷ್ಟು ಶಕ್ತಿ ಇಲ್ಲದಿದ್ದರೂ ಹರಿನಾಮವನ್ನು ಉಚ್ಚರಿಸುತ್ತಾ ಆನಂದಬಾಷ್ಪವನ್ನು ಸುರಿಸುತ್ತಿದ್ದರು. ಅವರ ಭಕ್ತಿ ದಿನೇದಿನೇ ವೃದ್ಧಿಯಾಗುತ್ತಿತ್ತು. ಅವರೆಡೆಗೆ ಹೋದವರೆಲ್ಲ ಅವರ ತ್ಯಾಗ, ತಪಸ್ಸು, ಪವಿತ್ರತೆ ಮತ್ತು ಭಕ್ತಿಗಳನ್ನು ಹೃತ್ಪೂರ್ವಕವಾಗಿ ಅನುಭವಿಸಿ ಆನಂದದಿಂದ ಹಿಂದಿರುಗುತ್ತಿದ್ದರು.

ಪ್ರಸಿದ್ಧ ಸಾಧಕರ ವಿಚಾರ ತಿಳಿದಕೂಡಲೇ ಶ್ರೀರಾಮಕೃಷ್ಣರು ಸ್ವತಃ ತಾವಾಗಿಯೇ ಅವರುಗಳ ದರ್ಶನಾಕಾಂಕ್ಷಿಯಾಗಿ ಹೋಗುತ್ತಿದ್ದುದ್ದು ಉಂಟು. ಬಾಬಾಜಿಯವರನ್ನು ನೋಡಲು ಶ್ರೀರಾಮಕೃಷ್ಣರು ಹೃದಯನೊಡನೆ ಕಾಲ್ನಾಕ್ಕೆ ಹೋದರು. ಬಾಬಾಜಿಯ ಬಳಿಗೆ ಬಂದಾಗ ಅವರೊಬ್ಬ ಸಾಧುವನ್ನು ಸಮಾಜದಿಂದ ಉಚ್ಚಾಟಿಸುವುದಾಗಿ ಬೆದರಿಸುತ್ತಿದ್ದರು. ಮರುಕ್ಷಣದಲ್ಲೇ ತಾವು ಲೋಕಶಿಕ್ಷಣಕ್ಕಾಗಿಯೇ ಮಾಲೆ, ತಿಲಕಾದಿಗಳನ್ನು ತ್ಯಜಿಸಿಲ್ಲ ಎಂದು ಭಕ್ತನೊಬ್ಬನ ಪ್ರಶ್ನೆಗೆ ಉತ್ತರಿಸುತ್ತಿರುವುದನ್ನು ಕಂಡ ಶ್ರೀರಾಮಕೃಷ್ಣರು ಕೋಪ ತಡೆಯಲಾಗದೆ ಅವರನ್ನು ತರಾಟೆಗೆ ತೆಗೆದುಕೊಂಡರು.

ಸಿದ್ಧಪುರುಷರಾದ ಬಾಬಾಜಿಯವರಲ್ಲಿ ದೋಷವನ್ನು ನೋಡಲು ಯಾರೂ ಇದುವರೆಗೆ ಸಾಹಸ ಮಾಡಿರಲಿಲ್ಲ. ಶ್ರೀರಾಮಕೃಷ್ಣರೂ ಸಹ ಗುರುಭಾವದ ಆವೇಶಕ್ಕೆ ಒಳಗಾದಾಗ ತಮ್ಮ ಮೂಲಕ ಏನು ಸಂಭವಿಸಿತು ಎನ್ನುವುದು ಅವರಿಗೆ ಆವೇಶದ ನಂತರವೇ ತಿಳಿದು ಬರುತ್ತಿತ್ತು. ಪ್ರಥಮವಾಗಿ ಬಾಬಾಜಿಗೆ ವಿಸ್ಮಯವೆನಿಸಿದರೂ, ಇಂತಹ ಪರಿಸ್ಥಿತಿಯಲ್ಲಿ ಸಾಧಾರಣ ವ್ಯಕ್ತಿಗಳು ಕ್ರೋಧಪರವಶರಾಗುವಂತೆ ಅವರು ಕೋಪಿಸಿಕೊಳ್ಳಲಿಲ್ಲ. ತಮ್ಮ ತಪಸ್ಸಿನಿಂದ ಉಂಟಾದ ಸರಳತೆಯಿಂದ ಶ್ರೀರಾಮಕೃಷ್ಣರ ಮಾತನ್ನು ಯಥಾರ್ಥವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು ಮತ್ತು ಅವರ ಅಂತರ್ದೃಷ್ಟಿಯು ಜಾಗೃತವಾಯಿತು. ತಮ್ಮ ದೋಷವನ್ನರಿತ ಬಾಬಾಜಿ ನಮ್ರರಾದರು.

ಶ್ರೀರಾಮಕೃಷ್ಣರು ಅಹಂಕಾರವನ್ನು ಅರಳಿಮರಕ್ಕೆ ಹೋಲಿಸುತ್ತಿದ್ದರು. ಎಷ್ಟೇ ಕಡಿದರೂ ಮತ್ತೆ ಮತ್ತೆ ಚಿಗುರೊಡೆಯುವುದು ಎಂದು. ಆದರೆ ಅದನ್ನು ಆತ್ಮಜ್ಞಾನವೆಂಬ ಬೆಂಕಿಯಲ್ಲಿ ಸುಟ್ಟುಬಿಟ್ಟರೆ ಮತ್ತೆ ಚಿಗುರದು. ಹೀಗೆ ಶ್ರೀರಾಮಕೃಷ್ಣರಲ್ಲಿ ವ್ಯಕ್ತವಾದ ಆ ಗುರುಭಾವವು ಉಚ್ಚ ಆಧ್ಯಾತ್ಮಿಕ ಸ್ಥಿತಿಯಲ್ಲಿದ್ದ ಸಾಧಕರ ಹಾದಿಯಲ್ಲಿನ ವಿಘ್ನಗಳನ್ನು ನಾಶಮಾಡಲು ಸಮರ್ಥವಾಯಿತು.

### ಗುರುಗಳಂತೆ ಬಂದು ಶಿಷ್ಯರಾದರು

ಬೇರೆ ಬೇರೆ ಸಂಪ್ರದಾಯಗಳಿಗೆ ಸೇರಿದ ಅನೇಕ ಮಂದಿ ಸಾಧುಗಳು, ಸಾಧಕರು ದಕ್ಷಿಣೇಶ್ವರಕ್ಕೆ ಬರುತ್ತಿದ್ದರು. ಅವರೆಲ್ಲಾ